ಅಧ್ಯಕ್ಷರು :— ನಾನು ಹೇಳಿದೆನಲ್ಲ; ನನ್ನ ಕಛೇರಿಗೆ ಇವರು ಬರುತ್ತಾರೆ. ಅವರೆಲ್ಲಾ ನೋಡಿದ್ದು ಆಗುತ್ತದೆ. ಅವರಿಗೆ ಅನುಮಾನ ಇದ್ದರೆ ಪುನ: ಅವರು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ಇಡೀ ಸದನಕ್ಕೆ ಈ ವಿಚಾರದಲ್ಲಿ ಸ್ಪಷ್ಟತೆ ಸಿಗುವ ಕಾರಣದಿಂದ ಅವರಿಬ್ಬರೂ ಆದ ಮೇಲೆ ಒಂದು ಹೇಳಿಕೆಯನ್ನೂ ಅವರ ಕಡೆಯಿಂದ ಸದನಕ್ಕೆ ಮಾಡಿಸುತ್ತೇನೆ. I will have one statement made since the House has seized of the matter. As you have rightly raised, ಇಡಿ ಸದನಕ್ಕೆ ಸ್ಪಷ್ಟತೆ ಕೊಡುವ ದೃಷ್ಟಿಯಿಂದ I will ask him to make a statement on the floor of the House

ಶ್ರೀ ಎಸ್.ಎಸ್. ಪಾಟೀಲ್ :— ನಾನು ಸ್ಟೇಟ್‌ಮೆಂಟ್ ಮಾಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಜಗದೀಶ್ ಶೆಟ್ಟರ್ ಅವರ ಪರವಾಗಿ ಮಾನ್ಯ ಬಸವನಗೌಡ ಪಾಟೀಲ್ ಯತ್ನಾಳ್ ಅವರು ಪ್ರಶ್ನೆ ಕೇಳುತ್ತಾರೆ. ಈ ಬಗ್ಗೆ ಅವರು ಪತ್ರ ಬರೆದಿದ್ದಾರೆ.

ಹುಬ್ಬಳ್ಳಿ-ಬಾಗಲಕೋಟೆ ರಸ್ತೆಯಲ್ಲಿ ವಾಹನ ಸಂಚಾರ.

343(2321) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ-ಗ್ರಾಮೀಣ) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಬಾಗಲಕೋಟೆ ರಸ್ತೆಯಲ್ಲಿ ವಾಹನಗಳ ಓಡಾಟದ ದಟ್ಟಣೆ ಜಾಸ್ತಿ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಕೈಕೊಂಡ ಕ್ರಮಗಳೇನು;

ಆ) ಈ ರಸ್ತೆ ಸಂಪೂರ್ಣ ಕೆಟ್ಟು ಹೋಗಿದ್ದು, ಇದರಿಂದ ವಾಹನಗಳ ಓಡಾಟಕ್ಕೆ ಬಹಳಷ್ಟು ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಈ ರಸ್ತೆ ಅಗಲೀಕರಣಮಾಡಿ ಅಭಿವೃದ್ಧಿಪಡಿಸಲು ಸರ್ಕಾರ ಕ್ರಮ ಕೈಕೊಳ್ಳುವುದೇ;

ಶ್ರೀ ಉಮೇಶ್ ವಿ. ಕತ್ತಿ (ಲೋಕೋಪಯೋಗಿ ಸಚಿವರು) :—

ಅ) ಗಮನಕ್ಕೆ ಬಂದಿದೆ. ಈ ರಸ್ತೆಯನ್ನು ಅಗಲ ಮಾಡುವ ಸಲುವಾಗಿ ವಿಶ್ವ ಬ್ಯಾಂಕ್ ಸಹಾಯದಲ್ಲಿ ಅಭಿವೃದ್ಧಿಪಡಿಸಲು ಯೋಚಿಸಲಾಗಿದೆ.

ಆ) ಗಮನಕ್ಕೆ ಬಂದಿದೆ. ರಸ್ತೆ ಕೆಟ್ಟಿರುವ ಭಾಗಗಳನ್ನು ವಾರ್ಷಿಕ ನಿರ್ವಹಣಾ ಅನುದಾನದಲ್ಲಿ ಸರಿಪಡಿಸಿ ವಾಹನ ಸಂಚಾರಕ್ಕೆ ತೊಂದರೆ ಆಗದಂತೆ ಕ್ರಮ ಕೈಗೊಳ್ಳಲಾಗಿದೆ.

ಇ) ಈ ರಸ್ತೆಯ ಕೆಲವು ಭಾಗಗಳಲ್ಲಿ 5.5 ಮೀ. ಹಾಗೂ 7.5 ಮೀ. ಅಗಲ ಮಾಡಲಾಗಿದೆ. ರಸ್ತೆಯ ಅಗಲೀಕರಣ ಹಾಗೂ ಬಲಪಡಿಸುವಿಕೆ ಮತ್ತು ಸಮಗ್ರ ಅಭಿವೃದ್ಧಿಯನ್ನು ವಿಶ್ವ ಬ್ಯಾಂಕ್ ಸಹಾಯದಲ್ಲಿ ಕೈಗೊಳ್ಳಲು ಎಲ್ಲಾ ಸಿದ್ಧತೆ ನಡೆಸಲಾಗುತ್ತಿದೆ.

ಶ್ರೀ ಬಸವರಾಜ್ ಪಾಟೀಲ್ ಯತ್ನಾಳ್:— ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಸಚಿವರು ರಾಷ್ಟ್ರೀಯ ಹೆದ್ದಾರಿ - 4ನ್ನು ಬಿಟ್ಟರೆ ಬೇರೆ ಯಾವ ದಾರಿಯಲ್ಲೂ ಓಡಾಡಿಲ್ಲವೆಂದು ನನಗನ್ನಿಸುತ್ತಿದೆ. ಬಾಗಲಕೋಟೆ ಮತ್ತು ಹುಬ್ಬಳ್ಳಿ ರಸ್ತೆ ಹದಗೆಟ್ಟು ಎರಡು ಮೂರು ವರ್ಷಗಳಾಯಿತು. -ಹೋದ ವರ್ಷ ಅತಿವೃಷ್ಟಿಯಿಂದ ಈ ರಸ್ತೆ ಸಂಪೂರ್ಣವಾಗಿ ಹದಗೆಟ್ಟಿರುವುದರಿಂದ ಇದರ ಕೆಲಸವನ್ನು ಯಾವಾಗ ತೆಗೆದುಕೊಳ್ಳುತ್ತೀರ ಎಂಬುದಕ್ಕೆ, ವಿಶ್ವಬ್ಯಾಂಕ್‌ನ ಸಹಾಯದಲ್ಲಿ ಇದರ ಕೆಲಸ ಕೈಗೊಳ್ಳಲು ಸಿದ್ಧತೆ ನಡೆಸಲಾಗುತ್ತಿದೆಯೆಂದು ಉತ್ತರವನ್ನು ಕೊಟ್ಟಿದ್ದಾರೆ. ಹಾಗಿದ್ದರೆ ವಿಶ್ವಬ್ಯಾಂಕ್‌ನ ಸಹಾಯದ ಸಿದ್ಧತೆಗಳು ಏನು? ಆ ಸಿದ್ಧತೆಗಳು ಯಾವಾಗ ಪೂರ್ಣ ಆಗುತ್ತದೆ? ಆ ಭಾಗದ ರಸ್ತೆಯ ಕೆಲಸ ಯಾವಾಗ ಪ್ರಾರಂಭವಾಗುತ್ತದೆ ಎಂಬ ಬಗ್ಗೆ ನಿರ್ದಿಷ್ಟವಾದ ಉತ್ತರವನ್ನು ಮಾನ್ಯ ಸಚಿವರಿಂದ ಬಯಸುತ್ತೇನೆ. ಈ ಬಗ್ಗೆ ಸಿದ್ಧತೆ ನಡೆಸುತ್ತಿದ್ದೇವೆ, ಇದು ನಮ್ಮ ಗಮನಕ್ಕೆ ಬಂದಿದೆ, ಪರಿಶೀಲನೆಯಲ್ಲಿ ಎಂಬ ಉತ್ತರವನ್ನು ತಾವು ಕೊಡಬಾರದು. ಉತ್ತರ ಕರ್ನಾಟಕದ ಬಗ್ಗೆ ಅನ್ಯಾಯವಾಗಿಲ್ಲವೆಂದು ಬಹಳ ಸಮರ್ಥವಾಗಿ ಮೊನ್ನೆ ಅವರು ಉತ್ತರವನ್ನು ಮಂಡಿಸಿದ್ದಾರೆ. ರಾಷ್ಟ್ರೀಯ ಹೆದ್ದಾರಿ - 4ನ್ನು ಬಿಟ್ಟು ಉಳಿದ ಹೆದ್ದಾರಿಗಳಲ್ಲಿ ಮಾನ್ಯ ಸಚಿವರು ಓಡಾಡಿ ಬಂದರೆ ಇದು ಅವರ ಗಮನಕ್ಕೆ ಬರುತ್ತದೆ. ಮಾನ್ಯ ಸಚಿವರು ಇದರ ಬಗ್ಗೆ ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕು.

ಶ್ರೀ ಉಮೇಶ್ ವಿ. ಕತ್ತಿ (ಮಾನ್ಯ ಲೋಕೋಪಯೋಗಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಈ ರಾಷ್ಟ್ರೀಯ ಹೆದ್ದಾರಿ -4ನ್ನು ಬಿಟ್ಟು ಹುಬ್ಬಳ್ಳಿ, ಬಿಜಾಪುರ, ಬಾಗಲಕೋಟೆ, ಬಿಜಾಪುರ-ಜೇವರ್ಗಿ ಈ ಎಲ್ಲಾ ರಸ್ತೆಗಳಲ್ಲಿ ನಾನು ಲೋಕೋಪಯೋಗಿ ಸಚಿವನಾದ ಮೇಲೆ ಓಡಾಡಿ ಬಂದಿದ್ದೇನೆ. ಬಿಜಾಪುರ ಬಾಗಲಕೋಟೆ ರಸ್ತೆಯ ಮೇಲೆ ನಾನು ಸಚಿವನಾದ ಮೇಲೆ ಮೂಲು ಸಲ ಓಡಾಡಿದ್ದೇನೆ. ಏಕೆಂದರೆ ನಾನು ಆ ಭಾಗದಿಂದ ಬಂದಿರುವುದರಿಂದ ಇಲ್ಲಿ ಹೆಚ್ಚಿನ ಸಂಪರ್ಕ ಇರುತ್ತದೆ. ಮಾನ್ಯ ಸದಸ್ಯರು ಹೇಳಿರುವಂತೆ ಈ ರಸ್ತೆ ಅತಿವೃಷ್ಟಿಯಿಂದ ಹದಗೆಟ್ಟಿದೆ. ಜೊತೆಗೆ ಇದು ಬಹಳ ಹಳೆಯ ರಸ್ತೆಯಾಗಿದೆ. ಇದರಿಂದ ಸಂಚಾರಕ್ಕೆ ತೊಂದರೆಯಾಗಿರುವುದು ನಿಜವಾಗಿದೆ. ಹೋದ ವರ್ಷ ಈ ರಸ್ತೆಯ ಅಭಿವೃದ್ಧಿಗಾಗಿ ಪ್ರತಿ ಕಿಲೋಮೀಟರ್‌ಗೆ ಐವತ್ತು ಸಾವಿರದಂತೆ ಇದುವರೆಗೆ ಸುಮಾರು ಏಳು ಲಕ್ಷ ರೂಪಾಯಿಗಳ ಖರ್ಚು ಮಾಡಿದ್ದೇವೆ. ಈ ರಸ್ತೆಯಲ್ಲಿ 5.5 ಕಿಲೋಮೀಟರ್ ರಸ್ತೆಯನ್ನು ಅಗಲೀಕರಿಸಿದ್ದೇವೆ. ಕೆಲವು ಕಡೆಗಳಲ್ಲಿ 7.5. ಮೀಟರ್ ಅಗಲ ಮಾಡಿದ್ದೇವೆ. ಈ ದಿಸೆಯಲ್ಲಿ ರಸ್ತೆಗಳ ಸುಗಮ ಸಂಚಾರಕ್ಕೆ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ವಿಶ್ವಬ್ಯಾಂಕ್ ಯೋಜನೆಯ ಅಡಿಯಲ್ಲಿ ಈ ರಸ್ತೆಯನ್ನು ಅಧ್ಯತೆಯಾಗಿ ತೆಗೆದುಕೊಳ್ಳಬೇಕೆಂದು ತೀರ್ಮಾನಿಸಿದ್ದೇವೆ. ಮೊನ್ನೆ ನಡೆದಂಥ ಸಚಿವ ಸಂಪುಟದ ಸಭೆಯಲ್ಲಿ ವಿಶ್ವಬ್ಯಾಂಕ್‌ನ ಯೋಜನೆಯ ಅಡಿಯಲ್ಲಿ ರಸ್ತೆಗಳಲ್ಲಿ ಈ ರಸ್ತೆಯೂ ಒಂದಾಗಿರುತ್ತದೆ. ಮುಂದಿನ ಡಿಸೆಂಬರ್ ಅಂತ್ಯದೊಳಗೆ ಇದರ ಸರ್ವೆ ಕೆಲಸವನ್ನು ವಿಶ್ವಬ್ಯಾಂಕ್‌ನವರು ಮಾಡುತ್ತಿದ್ದಾರೆ. ಬರುವ ಮಾರ್ಚ್‌ನಲ್ಲಿ ಈ ರಸ್ತೆಯ ಕೆಲಸವನ್ನು ವಿಶ್ವಬ್ಯಾಂಕ್ ಯೋಜನೆಯ ಅಡಿಯಲ್ಲಿ ಪ್ರತಿ ಕಿಲೋಮೀಟರ್‌ಗೆ ಸುಮಾರು ಇಪ್ಪತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ರಸ್ತೆ ಮಾಡಬೇಕೆಂದು ಕಾರ್ಯಕ್ರಮವನ್ನು ರೂಪಿಸಿದ್ದೇವೆ.

ಶ್ರೀ ಬಸವರಾಜ್ ಪಾಟೀಲ್ ಯತ್ನಾಳ್:— ಮಾನ್ಯ ಅಧ್ಯಕ್ಷರೆ, ಈ ಬಾಗಲಕೋಟೆ-ಹುಬ್ಬಳ್ಳಿ ರಸ್ತೆಯಲ್ಲಿ ಬೆಣ್ಣೆಹಳ್ಳ ಎಂಬ ದೊಡ್ಡದಾದ ಹಳ್ಳ ಇದೆ. ಇದರ ಬಗ್ಗೆ ಮಾನ್ಯ ಸಚಿವರಿಗೂ ತಿಳುವಳಿಕೆ ಇರಬಹುದು. ಅನೇಕ ಸಲ ಮಳೆ ಹೆಚ್ಚಾದಾಗ ಒಂದೊಂದು ದಿವಸ ಆ ಹಳ್ಳವನ್ನು ದಾಟಲು ಆಗುವುದಿಲ್ಲ. ಅಂಥ ಪರಿಸ್ಥಿತಿ ನಿರ್ಮಾಣ ಆಗುತ್ತದೆ. ಈ ಹಳ್ಳಕ್ಕೆ ಸೇತುವೆ ಕಟ್ಟುವ ಕೆಲಸವನ್ನು ಸರ್ಕಾರ ಈ ಯೋಜನೆಯಲ್ಲಿ ಹಾಕಿಕೊಂಡಿದೆಯೋ ಇಲ್ಲವೋ ಎಂಬ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ:— ಮಾನ್ಯ ಅಧ್ಯಕ್ಷರ, ವಿಶ್ವ ಬ್ಯಾಂಕ್ ಯೋಜನೆಯ ಅಡಿಯಲ್ಲಿ ಬಾಗಲಕೋಟೆ-ಹುಬ್ಬಳ್ಳಿ ನಡುವಿನ 124 ಕಿಲೋಮೀಟರ್ ರಸ್ತೆಯನ್ನು ವಿಶ್ವಬ್ಯಾಂಕ್ ಯೋಜನೆಯ ಅಡಿಯಲ್ಲಿ ಬರುವ ಸೇತುವೆಗಳಿರಲಿ, ರಸ್ತೆ ಆಗಲ ಮಾಡುವುದಿರಲಿ, ಸಿಟಿ ಲಿಮಿಟ್ ಬಂದಿದ್ದರೆ ಭೂಮಿಯನ್ನು ಸ್ವಾಧೀನ ಮಾಡಿಕೊಂಡು ಆಗಲ ಮಾಡುವ ಈ ಎಲ್ಲಾ ಕಾರ್ಯಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು:— ಇಲ್ಲಿಗೆ ಪ್ರಶ್ನೋತ್ತರ ಮುಕ್ತಾಯವಾಯಿತು. ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ.ಸಿ. ನಾಣಯ್ಯ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):— ಮಾನ್ಯ ಅಧ್ಯಕ್ಷರೆ, 24ರ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ 39 ಪ್ರಶ್ನೆಗಳ ಪೈಕಿ 35 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಶಾಸಕರ ಅನುದಾನದಲ್ಲಿ ನಡೆದ ಕಾಮಗಾರಿ.

1581(2281) ಶ್ರೀ ಆಶೋಕ್ ಶಂಕರ ಕಾಟ್ವೆ (ಹುಬ್ಬಳ್ಳಿ):— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಸಕರ ಅನುದಾನದಲ್ಲಿ ಹುಬ್ಬಳ್ಳಿ ನಗರಕ್ಕೆ ಕಳೆದ ಐದು ವರ್ಷಗಳಿಂದ ಯಾವಯಾವ ಕಾಮಗಾರಿಗಳಿಗೆ ಇಲ್ಲಿಯವರೆಗೆ ಒಟ್ಟು ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; (ಪ್ರತಿ ವರ್ಷದ ಸಂಪೂರ್ಣ ವಿವರ ನೀಡುವುದು);

ಆ) ಬಾಕಿ ಉಳಿದಿರುವ ಅನುದಾನ ಎಷ್ಟು?

ಶ್ರೀ ಉಮೇಶ್ ವಿ. ಕತ್ತಿ (ಲೋಕೋಪಯೋಗಿ ಸಚಿವರು):—

ಅ) ಶಾಸಕರ ಅನುದಾನದಲ್ಲಿ ಹುಬ್ಬಳ್ಳಿ ನಗರಕ್ಕೆ ಕಳೆದ ಐದು ವರ್ಷಗಳಿಂದ ಬಿಡುಗಡೆ ಮಾಡಲಾದ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಬಾಕಿ ಉಳಿದ ಅನುದಾನ ಯಾವುದು ಇರುವುದಿಲ್ಲ.